# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 05.04.2021 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.37 ಯಶವಂತಪುರ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.37ರ ವಾರ್ಡ್ ಕಛೇರಿ, ಮಾಡೆಲ್ ಕಾಲೋನಿ, 2ನೇ ಅಡ್ಡರಸ್ತೆಯ ಕಟ್ಟಡದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಎನ್. ಜಿ. ಉಮೇಶ್ | ಸಹಾಯಕ ಅಭಿಯಂತರರು | ಸದಸ್ಯರು | ಹಾಜರಿದ್ದರು |
| 3 | ಡಾ|| ಸುನೀತಾ | ವೈದ್ಯಾಧಿಕಾರಿಗಳು, ಪ್ರಾ. ಆ. ಕೇ. | ಸದಸ್ಯರು | ಹಾಜರಿದ್ದರು |
| 4 | ಡಾ|| ಹರ್ಷಿತ್ | ಕೋವಿಡ್ ವೈದ್ಯಾಧಿಕಾರಿಗಳು | ಸದಸ್ಯರು | ಹಾಜರಿದ್ದರು |
| 5 | ದಿವ್ಯಾ | ಕೋವಿಡ್ ನೋಡಲ್ ಅಧಿಕಾರಿ | ಸದಸ್ಯರು | ಹಾಜರಿದ್ದರು |
| 6 | ಶ್ರೀಮತಿ ಸುಜಾತಾ | ಹಿರಿಯ ಆರೋಗ್ಯ ಪರಿವೀಕ್ಷಕರು | ಸದಸ್ಯರು | ಹಾಜರಿದ್ದರು |
| 7 | ಶ್ರೀ ನಾರಾಯಣ್ | ಪಿ.ಎಸ್.ಐ., ಯಶವಂತಪುರ ಪೋಲಿಸ್ ಠಾಣೆ | ಸದಸ್ಯರು | ಹಾಜರಿದ್ದರು |
| 8 | ಮೊ. ಘಿಯಾಸುದ್ದೀನ್ | ಕೆಲಸ ಪರಿವೀಕ್ಷಕರು, ಬಿಡಬ್ಲ್ಯೂಎಸ್‌ಎಸ್‌ಬಿ | ಸದಸ್ಯರು | ಹಾಜರಿದ್ದರು |
| 9 | ಲೋಕೇಶ್ | ಬಿ.ಎಲ್.ಒ. ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 10 | ಹರೀಶ್ ಇ. | ಬಿ.ಎಲ್.ಒ. ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 11 | ಸಿದ್ದರಾಮಯ್ಯ | ಮೇಲ್ವಿಚಾರಕರು ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 12 | ತಿರುಪಾಲ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 13 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 14 | ಬಿ. ಜಾನ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 15 | ಗೌತಮ್ ರಾಜ್ | ಮಾರ್ಷಲ್ | ಸದಸ್ಯರು | ಹಾಜರಿದ್ದರು |
| 16 | ಮುರುಗೇಶ್ ಜಿ. | ಮಾರ್ಷಲ್ | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

<u>1) ಆರೋಗ್ಯ :-</u>

ವಾರ್ಡ್ ವ್ಯಾಪ್ತಿಯಲ್ಲಿ 19 ಪಾಸಿಟಿವ್ ಪ್ರಕರಣಗಳು, ಅದರಲ್ಲಿ 17 ಹೋಂ ಐಸೋಲೇಷನ್ ಕೇಸ್‌ಗಳು ಹಾಗೂ ಎರಡು ಆಸ್ಪತ್ರೆಯಲ್ಲಿ ಇರುವುದಾಗಿ ವೈದ್ಯಾಧಿಕಾರಿಗಳು ಸಭೆಗೆ ತಿಳಿಸಿದರು. ಅದರಂತೆ, ಅಧ್ಯಕ್ಷರು ಮಾತನಾಡಿ, ಹೋಂ ಐಸೋಲೇಷನ್ ಹಾಗೂ ಪಾಸಿಟಿವ್ ಪ್ರಕರಣಗಳ ಸುತ್ತಮುತ್ತಲು ಬರುವ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕದಲ್ಲಿ ಬರುವ ಸಾರ್ವಜನಿಕರನ್ನು ಗುರುತಿಸಿ, ಸಂಬಂಧಪಟ್ಟ ಟ್ರೇಸಿಂಗ್ ಟೀಂಗಳಿಗೆ ತಿಳಿಸಿ ಹಾಗೂ ಅವರುಗಳಿಗೆ ಕೂಡಲೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದಕ್ಕೆ ಸೂಚನೆಯನ್ನು ನೀಡಲು ಸಭೆಯಲ್ಲಿ ತಿಳಿಸಿದರು.

ಕೋವಿಡ್ ವ್ಯಾಕ್ಸಿನ್‌ನ್ನು ಏಪ್ರಿಲ್-1 ರಿಂದ 45 ವರ್ಷ ಮೇಲ್ಪಟ್ಟ ಎಲ್ಲಾ ನಾಗರೀಕರಿಗೂ ನೀಡಲಾಗುತ್ತಿದೆ. ಕೋವಿಡ್ ವ್ಯಾಕ್ಸೀನ್‌ನ್ನು ಬಿಬಿಎಂಪಿ ಹೆರಿಗೆ ಆಸ್ಪತ್ರೆ ಹಾಗೂ ರಾಜರಾಜೇಶ್ವರಿ ಶಾಲೆ, ಯಶವಂತಪುರ ಇಲ್ಲಿ ನೀಡಲಾಗುತ್ತಿರುತ್ತದೆ ಎಂದು ವೈದ್ಯಾಧಿಕಾರಿಗಳು ಸಭೆಗೆ ತಿಳಿಸಿದರು. ಹಾಗೂ ವ್ಯಾಕ್ಸೀನ್ ಬಗ್ಗೆ ಜಾಗೃತಿ ಮೂಡಿಸಲು ವಾರ್ಡ್‌ನ ವ್ಯಾಪ್ತಿಯಲ್ಲಿ ಧ್ವನಿವರ್ಧಕ ಹಾಗೂ ಆಟೋ ಮೂಲಕ ಸಾರ್ವಜನಿಕರಿಗೆ ತಿಳಿಸಲು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ಕೋರಿದರು. ಅದರಂತೆ, ಮಾನ್ಯ ಅಧ್ಯಕ್ಷರು ಮಾತನಾಡಿ, ಕೂಡಲೇ ಇದರ ವ್ಯವಸ್ಥೆಯನ್ನು ಮಾಡಿಕೊಡಲು ಸಹಾಯಕ ಅಭಿಯಂತರರಿಗೆ ತಿಳಿಸಿದರು.

ಟ್ರೇಸಿಂಗ್ ಟೀಂನ ಮೇಲ್ವಿಚಾರಕರಾದ ಸಿದ್ಧರಾಮಯ್ಯರವರು ಸಭೆಯನ್ನುದ್ದೇಶಿಸಿ, ವಾರ್ ರೂಂನಿಂದ ದಿನನಿತ್ಯ ಬರುವ ಕೋವಿಡ್ ಪಾಸಿಟಿವ್ ವ್ಯಕ್ತಿಯ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕದಲ್ಲಿ ಇರುವ ಸಾರ್ವಜನಿಕರ ಪಟ್ಟಿಯನ್ನು ಆಪ್ ಮೂಲಕ ಕಳುಹಿಸಲಾಗುವುದು. ಅದರಂತೆ, ನಮ್ಮ ತಂಡವು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕದ ವ್ಯಕ್ತಿಗಳನ್ನು ಗುರುತಿಸಿ, ಅವರುಗಳ ಮಾಹಿತಿಯನ್ನು ಆಪ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಎಂದು ಅವರ ಕಾರ್ಯವೈಖರಿಯನ್ನು ಸಭೆಗೆ ವಿವರಿಸಿದರು. ಅದರಂತೆ, ಅಧ್ಯಕ್ಷರು ಮಾತನಾಡಿ, ಟ್ರೇಸಿಂಗ್ ಟೀಂನ ಸದಸ್ಯರುಗಳು ದಿನನಿತ್ಯ ಆಸ್ಪತ್ರೆಯಲ್ಲಿಯೇ ಈ ಕಾರ್ಯಗಳನ್ನು ಆಸ್ಪತ್ರೆಯ ಸಿಬ್ಬಂದಿಯೊಡನೆ ಕೈಜೋಡಿಸಿ ಒಮ್ಮೆಲೆ ಕೋವಿಡ್ ಸೋಂಕಿತರಿಗೆ ಕರೆ ಮಾಡಲು ಸೂಚಿಸಿದರು.

ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಟಮಿನ್ ಸಿ, ವಿಟಮಿನ್ ಡಿ 3, ಪ್ಯಾರಸೆಟಮೋಲ್, ರೋಗ ನಿರೋಧಕ ಔಷಧಿಗಳು ಹಾಗೂ ಝಿಂಕ್ ಔಷಧಿಯ ಕೊರತೆಯಿದ್ದು, ಔಷಧಿಯನ್ನು ಪೂರೈಸಲು ಆರೋಗ್ಯ ಇಲಾಖೆ ಗಮನ ಕೊಡದೇ ಇರುವುದು ಕಂಡುಬಂದಿದ್ದು, ಕ್ರಮವಹಿಸಲು ಸೂಚಿಸಲಾಯಿತು.

**2) ಪೌರ ಕಾರ್ಮಿಕರ ಬಗ್ಗೆ:**

ಪೌರ ಕಾರ್ಮಿಕರಾದ ಸುನೀತಾರವರ ವೇತನವು ಸುಮಾರು ಎರಡು ತಿಂಗಳಿಂದ ಆಗದೇ ಇರುವುದು ಮಾನ್ಯ ಅಧ್ಯಕ್ಷರ ಗಮನಕ್ಕೆ ಬಂದಿರುತ್ತದೆ. ಅದರಂತೆ, ಅಧ್ಯಕ್ಷರು ಕಿರಿಯ ಆರೋಗ್ಯ ಪರಿವೀಕ್ಷಕರನ್ನು ಕೇಳಿದಾಗ ಸುನೀತಾರವರ ದಾಖಲೆಯ ಪುಸ್ತಕವು ಮೆಡಿಕಲ್ ಪರಿಶೀಲನೆ ಮಾಡಲು ಕಳುಹಿಸಿದೆ ಎಂದು ಸಭೆಗೆ ತಿಳಿಸಿದರು. ಪೌರ ಕಾರ್ಮಿಕರಿಗೆ ಪೊರಕೆ, ತಳ್ಳುವ ಗಾಡಿ ಹಾಗೂ ವಸ್ತ್ರಗಳು ಬೇಕಾಗಿರುವುದಾಗಿ ಮಾನ್ಯ ಅಧ್ಯಕ್ಷರಲ್ಲಿ ಕಿರಿಯ ಆರೋಗ್ಯ ಪರಿವೀಕ್ಷರು ತಿಳಿಸಿದರು. ಅದರಂತೆ, ಮಾನ್ಯ ಅಧ್ಯಕ್ಷರು ಕೂಡಲೇ ಸಂಭಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರಾದ ಶ್ರೀ ಗುರುಕುಮಾರ್ ರವರಿಗೆ ಕರೆ ಮಾಡಿ ಕೂಡಲೇ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಿದರು.

**3) ಬೀದಿ ಬದಿ ವ್ಯಾಪಾರಿಗಳ ತೆರವುಗೊಳಿಸುವ ಬಗ್ಗೆ:-**

ಯಶವಂತಪುರ 1ನೇ ಮುಖ್ಯರಸ್ತೆ ಹಾಗೂ ಬಜಾರ್ ಸ್ಟ್ರೀಟ್ ರೋಡಲ್ಲಿ ಬೀದಿ ಬದಿ ವ್ಯಾಪಾರಿಗಳು ರಸ್ತೆ ಬದಿಯಲ್ಲಿ ತಮ್ಮ ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರವನ್ನು ಮಾಡುತ್ತಿರುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಕೂಡಲೇ ವ್ಯಾಪಾರಿಗಳನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಮಾರ್ಷಲ್, ಪೋಲಿಸ್ ಸಿಬ್ಬಂದಿಗಳಿಗೆ, ಮೇಲ್ವಿಚಾರಕರು ಹಾಗೂ ಗ್ಯಾಂಗ್‌ಮ್ಯಾನ್‌ಗಳಿಗೆ ತಿಳಿಸಿದರು.

**4) ಕಂದಾಯ ಇಲಾಖೆ:**

ಕಂದಾಯ ವಸೂಲಿಗಾರರು ಮಾತನಾಡಿ, ವಾರ್ಡ್‌ನಲ್ಲಿ ಒಟ್ಟು 84.75 ಲಕ್ಷಗಳ ಕಂದಾಯವು ಬಾಕಿ ಇರುವುದಾಗಿ ಸಭೆಗೆ ತಿಳಿಸಿದರು. 2021-22ರ ಒಟ್ಟು ಕಂದಾಯವು ರೂ.2.31 ಕೋಟಿ ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

**5) ಬಿಡಬ್ಲ್ಯೂಎಸ್‌ಎಸ್‌ಬಿ :**

ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು 410 ದೂರುಗಳು ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಗೆ ಬಂದಿದೆ ಎಂದು ಕೆಲಸ ಪರಿವೀಕ್ಷಕರು ಸಭೆಗೆ ತಿಳಿಸಿದರು. ವಾರ್ಡ್‌ನಲ್ಲಿ ಸೌಲಭ್ಯವಿರುವುದು 02 ವಾಹನಗಳು ಆದುದರಿಂದ ಹೆಚ್ಚಾಗಿರುವ ದೂರುಗಳನ್ನು ವಿಲೇ ಮಾಡಲು ತಡವಾಗುತ್ತಿದೆ, ಕೂಡಲೇ ಆದ್ಯತೆ ಮೇರೆಗೆ ದೂರುಗಳನ್ನು ವಿಲೇ ಮಾಡುತ್ತೇವೆ ಎಂದು ತಿಳಸದರು. ಬಿ. ಕೆ. ನಗರ, 9ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಡ್ರೈನೇಜ್ ಬ್ಲಾಕ್ ಆಗಿರುವುದಾಗಿ ಪಾಲಿಕೆ ಮಾಜಿ ಸದಸ್ಯರಾದ ಜಿ. ಕೆ. ವೆಂಕಟೇಶ್‌ರವರು ದೂರವಾಣಿ ಮೂಲಕ ಬಿಬಿಎಂಪಿ ಸಹಾಯಕ ಅಭಿಯಂತರರಿಗೆ ತಿಳಿಸಿದ್ದರು. ಅದರಂತೆ, ಸಭೆಗೆ ಹಾಜರಿದ್ದ ಪರಿವೀಕ್ಷಕರಿಗೆ ಕೂಡಲೇ ಸದಸ್ಯರ ದೂರನ್ನು ವಿಲೇ ಮಾಡಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

6) ಮಾರ್ಷಲ್

ಮುಂಜಾನೆ 7.00ರ ಸಮಯದಲ್ಲಿ ಮಾಸ್ಕ್ ಹಾಕದೇ ವ್ಯಾಪಾರಿಗಳು ವ್ಯಾಪಾರವನ್ನು ಮಾಡುತ್ತಿರುವುದು ಕಂಡುಬಂದಿರುತ್ತದೆ. ಸರ್ಕಾರದ ಆದೇಶದಂತೆ ದಂಡವನ್ನು ಹಾಕಲು ಹೋದಾಗ ಮಾಸ್ಕನ್ನು ವಿತರಿಸಿ ನಂತರ ದಂಡವನ್ನು ಹಾಕುವುದಾಗಿ ಸಾರ್ವಜನಿಕರು ಹಾಗೂ ವ್ಯಾಪಾರಸ್ಥರು ಕೂಡಿಕೊಂಡು ಗಲಾಟೆ ಮಾಡುತ್ತಾರೆ ಎಂದು ಸಭೆಗೆ ತಿಳಿಸಿದರು. ಅದರಂತೆ, ಅಧ್ಯಕ್ಷರು ಮಾತನಾಡಿ, ಅಂತಹ ತುರ್ತು ಸಂದರ್ಭದಲ್ಲಿ ಪೋಲಿಸರ ಹಾಗೂ ಆರೋಗ್ಯ ಸಿಬ್ಬಂದಿಗಳ ಸಹಾಯವನ್ನು ಪಡೆದುಕೊಳ್ಳಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎನ್. ಜಿ. ಉಮೇಶ್)
ಸ.ಕಾ.ನಿ.ಅ ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:37

Asst. Executive Engineer
Yeshwanthpur Sub-Division
Bruhat Bangalore Mahanagara Palike